

ಚಿತ್ರ: ತಾಜುದ್ದೀನ್ ಆಜಾದ್

ಪ್ರಚೋದಕ ಔಷಧಿಗಳು, ಖಿನ್ನತೆ ನಿವಾರಿಸುವ ಔಷಧಿಗಳು, ಭೇದಿಜನಕ ಸಿರಪ್‌ಗಳು ಇತ್ಯಾದಿ ಸಾಲಿನಲ್ಲಿ ಕಾಣಿಸಿಕೊಳ್ಳುತ್ತವೆ. ಹದಿಹರೆಯದವರಲ್ಲಿ ಪ್ರಚೋದಕ ಔಷಧಿಗಳೊಡನೆ, ಕೆಮ್ಮಿನ ಸಿರಪ್‌ಗಳು, ನಿದ್ರಾಜನಕ ಮಾತ್ರೆಗಳು ಹೆಚ್ಚು ಜನಪ್ರಿಯವಾಗಿವೆ.

ಭಾರತದಲ್ಲಿ ಈ ಹಾವಳಿಯ ಸ್ವರೂಪ ಸ್ವಲ್ಪ ಆಚೆ ಈಚೆ ಅಷ್ಟೇ. ಆದರೆ ಕರಾಳತೆ ಹಾಗೂ ಅಪಾಯ ಎಲ್ಲೆಡೆಯೂ ಒಂದೇ. ಕಾನೂನು ಸಮ್ಮತಿಯೊಂದಿಗೆ ಲಭ್ಯವಿರುವ ಈ ಔಷಧಿಗಳಿಗೆ ಹಲವು ಮುಖಗಳಿವೆ. ಇವುಗಳಲ್ಲಿ ಸಾಮಾನ್ಯವಾಗಿ ದುರ್ಬಳಕೆಯಾಗುವ ಔಷಧಿಗಳಲ್ಲಿ ಹಲವು ಬಗೆಯಾದರೂ, ಈ ಆರು ಪದಾರ್ಥಗಳ ದುರ್ಬಳಕೆ ತುಸು ಜಾಸ್ತಿಯೇ ಕಂಡು ಬರುತ್ತದೆ.

1. ಆತಂಕ– ನಿವಾರಕ ಔಷಧಿಗಳು (**Anti – anxiety drugs**): ಇವನ್ನು ಜನಸಾಮಾನ್ಯರು ನಿದ್ದೆ ಮಾತ್ರೆ ಎಂದೇ ಕರೆಯುತ್ತಾರೆ. ಆದರೆ ವೈದ್ಯರಾದವರು ಅದರಲ್ಲೂ, ಮನೋ ವೈದ್ಯರು ನಿದ್ದೆ ಬರಿಸುವ ಉದ್ದೇಶದಲ್ಲಿ ಕೊಡೋದಿಲ್ಲ. ಇದನ್ನು ಆತಂಕದ ಮನೋಬೇನೆಗೆ, ಖಿನ್ನತೆಗೆ, ಒತ್ತಡ ಸಂಬಂಧಿತ ಕಾಯಿಲೆಗಳಿಗೆ, ಕೆಲವೊಮ್ಮೆ ಮಾದಕ ವಸ್ತುಗಳ ವ್ಯಸನದಿಂದ ಉಂಟಾಗುವ ಹಿಂತೆಗೆತದ ನಿವಾರಣೆಗೆ ಬಳಸುತ್ತಾರೆ. ಇದರಲ್ಲಿ ಸುಲಭವಾಗಿ ಲಭ್ಯವಿರುವ **Diazepam, Alprazolam, Nitrezepam, Lorezepam** ನಂತಹ ಮಾತ್ರೆಗಳನ್ನು ಒತ್ತಡದಲ್ಲಿರುವವರು ನುಂಗಿ ಎಷ್ಟೋ ಆರಾಮವಾಗುತ್ತಾರೆ.

ಈ ಮಾತ್ರೆಗಳ ಬಳಕೆಯನ್ನು ನಾಲ್ಕೈದು ವಾರದೊಳಗೆ ಕಡಿಮೆಯಾಗಿಸಿ ನಿಲ್ಲಿಸಿ ಬಿಡುವ ಯೋಚನೆಯಲ್ಲಿ ವೈದ್ಯರು ಇರುತ್ತಾರೆ. ಆದರೆ ಹಲವು ರೋಗಿಗಳು ಎರಡು ಮೂರು ವಾರಗಳಲ್ಲಿಯೇ ಇದರ ಮೇಲೆ ಅವಲಂಬಿತರಾಗಲು ಶುರು ಮಾಡುತ್ತಾರೆ. ತದನಂತರ ನಿಲ್ಲಿಸಲು ಆಗದೇ ಇರುವ ಪರಿಸ್ಥಿತಿ ಬರುತ್ತದೆ. ಇದರ ಅತಿ ಬಳಕೆಯಿಂದ ಹಾಗೂ ಹಠಾತ್ತನೆ ನಿಲ್ಲಿಸುವುದರಿಂದ ಆಗುವ ಹಿಂತೆಗೆತದಿಂದ ಕೆಲವೊಮ್ಮೆ ಭ್ರಮೆ– ಭ್ರಾಂತಿ, ಮಾಂಸಖಂಡಗಳ ತೀವ್ರ ಸೆಳೆತ, ಹಾಗೂ ವಾಕರಿಕೆ ಉಂಟಾಗಬಹುದು,

2. ಶೀತದ ಮಾತ್ರೆಗಳು ಅಥವಾ ಅಲರ್ಜಿ ಮಾತ್ರೆಗಳು (**Antihistaminic**): ಈ ಮಾತ್ರೆಗಳು, ಅವೂ **opiates** ಜೊತೆಗೆ ಸೇರಿಸಿ ಕೊಟ್ಟರೆ ಅಮಲಿನ ಸ್ಥಿತಿಯನ್ನುಂಟು ಮಾಡಿ, ಮತ್ತೆ ಮತ್ತೆ ತೆಗೆದುಕೊಳ್ಳುವಂತೆ ಮಾಡುತ್ತದೆ. ಈ ಮಾತ್ರೆಗಳನ್ನು ತ್ಯಜಿಸಿದಾಗ ಕೆಲವೊಮ್ಮೆ ನಿದ್ರಾಹೀನತೆ, ಗಮನ ಕೇಂದ್ರಿಕರಿಸಲು ತೊಂದರೆ, ಆತಂಕ ಇವೆಲ್ಲವೂ ಆಗುವುದರಿಂದ ಜನ ಅದರ ಬಳಕೆಯನ್ನು ಮುಂದುವರೆಸುತ್ತಾರೆ. ಇದೂ ದುರ್ಬಳಕೆಯೇ.

3. ನೋವು ನಿವಾರಕ **opioid** ಮಾತ್ರೆಗಳು: ಇವು ನೋವು ನಿವಾರಣೆಯ ಜೊತೆಗೆ ಮಾದಕತೆಯನ್ನು ಸೃಷ್ಟಿಸುವುದರಿಂದ ಇದಕ್ಕೆ ವ್ಯಸನಿಗಳಾಗುವವರ ಸಂಖ್ಯೆ ಜಾಸ್ತಿಯೇ. ತೀವ್ರತರವಾದ ಭ್ರಮೆ– ಭ್ರಾಂತಿ, ಅತೀವ ನೋವು ಎಲ್ಲವೂ ಹಿಂತೆಗೆತದ ವೇಳೆ ಕಾಣಿಸಿಕೊಳ್ಳಬಹುದು.

4. ಕೆಮ್ಮಿನ ಟಾನಿಕ್ಕುಗಳು (**cough syrup**): ಇದರಲ್ಲಿ ಕೆಲವೊಮ್ಮೆ **codeine** ಅಂತ ನಿದ್ರಾಜನಕ ನಶಾ ಪದಾರ್ಥ ಬಳಕೆಯಾಗುವುದರಿಂದ ಇದರ ದುರ್ಬಳಕೆ ಸುಲಭ.

5. ಖಿನ್ನತಾ – ನಿವಾರಕ ಔಷಧಿಗಳು (**Anti deprecates**): ಇವು